**ಸಾಕ್ಷಿಯನ್ನು ದಿಃ *11/03/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ ಸಿಎಸಬಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ನಮ್ಮ ಮನೆ ಧಾರವಾಡದ ಸಂಪಿಗೆನಗರದಲ್ಲಿರುತ್ತದೆ ಎಂದರೆ ನಿಜ. ಸದರಿ ಏರಿಯಾ ಊರಿನ ಹದ್ದಿನಲ್ಲಿರುತ್ತದೆ ಎಂದರೆ ನಿಜ. ನನ್ನ ಪತಿ ಬಿಎಎಂಎಸ ವೈದ್ಯರು ಇದ್ದರು. ಸದರಿಯವರು 2001-02 ರಲ್ಲಿ ಪದವಿಯನ್ನು ಮುಗಿಸಿರಬಹುದು. 2001 ನೇ ಇಸ್ವಿಯಲ್ಲಿ ನಮ್ಮ ಮನೆ ಧಾರವಾಡದಲ್ಲಿ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಿಜ, ನನ್ನ ಮದುವೆಯಾದ ನಂತರ ಧಾರವಾಡಕ್ಕೆ ಬಂದಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಮನೆಯನ್ನು 2024 ನೇ ಇಸ್ವಿಯಲ್ಲಿ ಕಟ್ಟಿಸಿರುತ್ತೇವೆ. ಸ್ವಂತ ಮನೆ ಕಟ್ಟುವ ಮೊದಲು ನಾವು ಅಲ್ಲಿಯೇ ಬಾಡಿಗೆಮನೆಯಲ್ಲಿದ್ದೇವು. ಆವಾಗಲೂ ಸಹ ನನ್ನ ಪತಿ ವೈದ್ಯಕೀಯ ವೃತ್ತಿ ಮಾಡುತ್ತಿದ್ದರು. ಸದರಿ 2001 ನೇ ಇಸ್ವಿಯಿಂದ ತಮ್ಮ ವೃತ್ತಿ ಮಾಡುತ್ತಿರುವ ಕುರಿತ ಪರವಾನಿಗೆ ಇರುತ್ತದೆ. ಸದರಿ ಪರವಾನಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2016-17 ನೇ ಇಸ್ವಿ ಹೊರತುಪಡಿಸಿ ಸದರಿಯವರು ಮಹಾನಗರ ಪಾಲಿಕೆಯಿಂದ ಸೂಕ್ತ ಪರವಾನಿಗೆ ಯಾವತ್ತೂ ಪಡೆದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ವೈದ್ಯ ವೃತಿ ಹೊರತುಪಡಿಸಿ ನನ್ನ ಪತಿ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ನಿಜ. 2016-17 ರನ್ನು ಹೊರತುಪಡಿಸಿ ಯಾವತ್ತು ಸಹ ನನ್ನ ಪತಿ ವೈದ್ಯ ವೃತ್ತಿ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ಪತಿಗೆ ಮಾಸಿಕ ಉತ್ಪನ ರೂ.1,50,000/- ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಎಷ್ಟು ಜನ ರೋಗಿಗಳನ್ನು ತಪಾಸಣೆ ಮಾಡುತ್ತಿದ್ದರು ಎನ್ನುವ ಕುರಿತು ರಜಿಸ್ಟರ ಇರುವುದನ್ನು ನಾನು ನೋಡಿಲ್ಲ. ಈ ರೀತಿ ರೂ1,50,000/- ಉತ್ಪನದ ಹೇಳಿಕೆ ಆಧಾರರಹಿತ ಹೇಳಿಕೆ ಎಂದರೆ ಸರಿಯಲ್ಲ. ನನ್ನ ಪತಿ ಆದಾಯ ತೆರಿಗೆ ವಿವರಗಳಪಟ್ಟಿಯನ್ನು 2011 ರಿಂದ 2023 ರವರೆಗೆ ಸಲ್ಲಿಸಿದ್ದು, ಸದರಿಯವರು ತೀರಿಹೋಗುವ ಮೂರು ವರ್ಷದ ಮೊದಲಿನ ವಿವರಗಳ ಪಟ್ಟಿ ಎಂದರೆ ನಿಜ. ಅಪಘಾತವಾದ ನಂತರ ಇರುವ ವಿವರಗಳ ಪಟ್ಟಿ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿಯವರಿಗೆ ಆದಾಯ ತೆರಿಗೆ ಕಟ್ಟುವ ಸಂಬಳ ಮತ್ತು ಸಾಮರ್ಥ್ಯವಿರಲಿಲ್ಲ ಆದ್ದರಿಂದ ಅಪಘಾತವಾಗುವ ಸಮಯದಲ್ಲಿ ಇರುವ ವಿವರಗಳ ಪಟ್ಟಿ ಹಾಜರುಪಡಿಸಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಆದಾಯ ತೆರಿಗೆಯಲ್ಲಿ ನಮೂದಿಸಿರುವ

ಆದಾಯ ವೈದ್ಯ ವೃತ್ತಿಯಿಂದ ಬಂದ ಆದಾಯ ಇರುವುದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

ಮಿಶ್ರಾ ಕಂಪನಿಯ ಕಾರ್ಮಿಕರನ್ನು ತಪಾಸಣೆ ಮಾಡಲು ನನ್ನ ಪತಿ 6 ತಿಂಗಳಿಂದ ಹೋಗುತ್ತಿದ್ದರು. ನಿ.ಪಿ.17 ರಂತೆ ಇರುವ ದಾಖಲೆಯು ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲಾತಿ ಎಂದರೆ ಸರಿಯಲ್ಲ. ಸದರಿ ದಾಖಲಾತಿ ಪ್ರಕಾರ 2014 ರಿಂದ ಮಿಶ್ರಾ ಕಂಪನಿಯಲ್ಲಿ ನನ್ನ ಪತಿ ಕೆಲಸ ಮಾಡುತ್ತಿದ್ದರು ಎಂದು ಬರೆದಿದ್ದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 17-09-2024 ರಿಂದ ಅವರು ಅಲ್ಲಿ ಕೆಲಸ ಮಾಡುತ್ತಿದ್ದರು ಎಂದು ಉತ್ತರಿಸುತ್ತಾರೆ. ಹೀಗಿರುವಾಗ ದಿನಾಂಕ ನಮೂದಿಸಿ ಮಿಶ್ರಾರವರು ಕೊಟ್ಟಿರುವ ದಾಖಲಾತಿ ಖೊಟ್ಟಿ ದಾಖಲಾತಿ ಎಂದರೆ ಸರಿಯಲ್ಲ.

ಮಿಶ್ರಾ ಕಂಪನಿ ಯರಿಕೊಪ್ಪ ಗ್ರಾಮದಲ್ಲಿರುತ್ತದೆ ಎಂದರೆ ನಿಜ. ನಮ್ಮ ಮನೆಯಿಂದ ಸದರಿ ಕಂಪನಿ 15 ಕಿ.ಮಿ ಅಂತರದಲ್ಲಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 10 ಕಿ.ಮಿ ಆಗಬಹುದು ಎಂದು ಉತ್ತರಿಸುತ್ತಾರೆ. ಸದರಿ ಕಂಪನಿಗೆ ಕೆಲಗೇರಿಯಿಂದ ಇರುವ ಬೈಪಾಸ ರಸ್ತೆಯಿಂದ ಹೋಗಬಹುದು ಎಂದರೆ ನಿಜ. ನನ್ನ ಪತಿಗೆ ಮದ್ಯಪಾನ ಮಾಡುವ ಅಭ್ಯಾಸವಿತ್ತು ಎಂದರೆ ಸರಿಯಲ್ಲ. ಅಪಘಾತ ದಿನದದು ಸದರಿಯವರು ಮದ್ಯಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಅಪಘಾತ ದಿನದಂದು ನನ್ನ ಪತಿ ಮದ್ಯಾಹ್ನ 2-30 ಗಂಟೆಗೆ ಮನೆ ಬಿಟ್ಟಿರುತ್ತಾರೆ. ಅಪಘಾತವು ಮದ್ಯಾಹ್ನ 2.40 ಗಂಟೆಗೆ ಆಗಿರುತ್ತದೆ ಎಂದರೆ ನಿಜ. ಅಪಘಾತವಾದ ಸ್ಥಳದಲ್ಲಿ ನನ್ನ ಪತಿ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ನನ್ನ ಪತಿಯ ಶವ ಪರೀಕ್ಷಾ ವರದಿ ನೋಡಿರುತ್ತೇನೆ. ಸದರಿ ವರದಿಯಲ್ಲಿ ನನ್ನ ಪತಿ ಮದ್ಯಪಾನ ಸೇವಿಸಿದ್ದರು ಎಂದು ಉಲ್ಲೇಖವಿದೆ ಎಂದರೆ ಸರಿಯಲ್ಲ. ಮದ್ಯಪಾನ ಸೇವನೆ ಕುರಿತು ವೈದ್ಯರು ರಕ್ತದ ಮಾದರಿಯನ್ನು ಎಫಎಸಎಲ ತಜ್ಞರಿಗೆ ಕಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವರದಿಯು ನಿ.ಪಿ.7 ರಂತೆ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಪತಿ ಮದ್ಯಪಾನ ಮಾಡುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ.

ಅಪಘಾತವಾದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಆದ್ದರಿಂದ ಅಪಘಾತದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ನಿಜ. ಅಪಘಾತಕ್ಕೆ ಒಳಗಾದ ಲಾರಿ ಚಾಲಕ ನಿಧಾನವಾಗಿ ತನ್ನ ಲಾರಿ ಚಲಾಯಿಸುತ್ತಿದ್ದ, ನನ್ನ ಪತಿ ಅತೀಯಾದ ಮದ್ಯಪಾನ ಸೇವಿಸಿ ನಿಯಂತ್ರಣವಾಗದೆ ತಾವೇ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿ ಸ್ಥಳದಲ್ಲಿ ಮೃತ ಪಟ್ಟ ಕಾರಣ ಪೊಲೀಸರು ನಮಗೆ ಪರಿಹಾರ ಸಿಗಲಿ ಎಂದು ಅಂತಿಮ ವರದಿಯನ್ನು ಲಾರಿ ಚಾಲಕನ ವಿರುದ್ದ ತಪ್ಪಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಪತಿಯ ತಿಪ್ಪಿನಿಂದ ಆಗಿರುವ ಕಾರಣ ಎದುರುದಾರರು ಯಾವುದೇ ರೀತಿ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ನನ್ನ ಪತಿಗೆ ತಂದೆ ತಾಯಿ 3 ಮತ್ತು 4 ನೇ ಎದುರುದಾರರು ಎಂದರೆ ನಿಜ. ಸದರಿಯವರು ನನ್ನ ಜೊತೆಗೆ ವಾಸ ಮಾಡುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಪ್ರತ್ಯೇಕವಾಗಿ ನರಗುಂದದಲ್ಲಿ ವಾಸ ಮಾಡುತ್ತಾರೆ, ಆದರೆ ನಮ್ಮ ಸಂಬಂಧ ಚೆನ್ನಾಗಿದೆ ಎಂದು ಉತ್ತರಿಸುತ್ತಾರೆ. ನನ್ನ ಮಾವ ಸರಕಾರಿ ಶಾಲೆಯಲ್ಲಿ ಮುಖ್ಯೋಪಾದ್ಯಾಯರಾಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ನಿಜ. ಸದರಿಯವರು ಪಿಂಚಣಿದಾರರು ಎಂದರೆ ನಿಜ. ಸದರಿಯವರಿಗೆ ನರಗುಂದ ಗ್ರಾಮದಲ್ಲಿ ಜಮೀನು ಮತ್ತು ಮನೆ ಇದೆ ಎಂದರೆ ನಿಜ. ನನ್ನ ಪತಿ ಜೀವಂತವಿರುವಾಗ ನಾವು ಅವರನ್ನು ನೋಡಿಕೊಂಡಿಲ್ಲ ಎಂದರೆ ನಿಜ. ಅಂತಿಮವರದಿಯಲ್ಲಿ ನನ್ನ ಪತಿಯನ್ನು ಸಹ ಆರೋಪಿತರು ಎಂದು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

***ಪಾಟೀ ಸವಾಲು : ಎದುರುದಾರ ನಂ.3 ಮತ್ತು 4 ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಹಾಜರಿರುವುದಿಲ್ಲ ಹಾಗೂ ಯಾರೂ ಪ್ರತಿನಿಧಿಸಿರುವುದಿಲ್ಲ. ನ್ಯಾಯತಾ ದೃಷ್ಟಿಯಿಂದ ಅವರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.